ಕೊಳ್ಳೇಗಾಲ ಮತ್ತು ಯಳಂದೂರು ಕ್ಷೇತ್ರಗಳನ್ನು ಪೂರ್ಣ ನೀರಾವರಿ ಪ್ರದೇಶವೆಂದು ಘೋಷಣೆ ಮಾಡುವ ಬಗ್ಗೆ

2392(2823) ಶ್ರೀ ಜಿ.ಎನ್. ನಂಜುಂಡಸ್ವಾಮಿ (ಕೊಳ್ಳೇಗಾಲ) :— ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕೊಳ್ಳೇಗಾಲ ಮತ್ತು ಯಳಂದೂರು ಕ್ಷೇತ್ರಗಳು ಹಲವು ಕೆರೆಗಳಿಂದ ಹಾಗೂ ಕಬಿನಿ ನಾಲೆಗಳಿಂದ ಸಂಪೂರ್ಣ ನೀರಾವರಿಯಾಗಿದ್ದರೂ ಸಹ ಸರ್ಕಾರ ಅರೆ ನೀರಾವರಿ ಪ್ರದೇಶವೆಂದು ಘೋಷಣೆ ಮಾಡಲಾಗಿದೆಯೇ;

ಆ) ಹಾಗಿದ್ದಲ್ಲಿ ಕಾರಣಗಳೇನು;

ಇ) ಈ ಕ್ಷೇತ್ರಗಳನ್ನು ಸಂಪೂರ್ಣ ನೀರಾವರಿ ಪ್ರದೇಶ ಎಂದು ಘೋಷಣೆ ಮಾಡಲು ಸರ್ಕಾರ ಕ್ರಮಕೈಕೊಳ್ಳುವುದೇ?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :—

ಅ) ಹೌದು

ಆ) ಕಬಿನಿ ಜಲಾಶಯ ಯೋಜನೆ ಅನುಷ್ಠಾನಕ್ಕೆ ಮುನ್ನ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕಿನಲ್ಲಿ ಮಳೆಯ ಆಧಾರಿತ ಒಳ ಹರಿವಿನಿಂದ ತುಂಬುತ್ತಿದ್ದ ಕೆರೆಗಳ ವ್ಯಾಪ್ತಿಯ ಅಚ್ಚುಕಟ್ಟು ಪ್ರದೇಶವನ್ನು ಕಬಿನಿ ಜಲಾಶಯ ಯೋಜನೆಯ ಅಡಿಯಲ್ಲಿ ಸೇರಿಸಿಕೊಂಡು ನಾಲೆಯ ಮುಖಾಂತರ ಅನುಮೋದಿತ ಯೋಜನಾ ವರದಿಯಂತೆ ಅರೆ ನೀರಾವರಿ ಬೆಳೆಗಳಿಗೆ ಖಾತರಿಯಾದ ನೀರು ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ಸದರಿ ಅಚ್ಚುಕಟ್ಟನ್ನು ಅರೆ ನೀರಾವರಿ ಪ್ರದೇಶವೆಂದು ಘೋಷಿಸಲಾಗಿದೆ.

ಇ) ಅಚ್ಚುಕಟ್ಟುದಾರರ ಮನವಿಯ ಮೇರೆಗೆ ವಿತರಣಾ ನಾಲೆ 41ರಿಂದ 60ರವರೆವಿಗೂ ಪೂರ್ಣ ನೀರಾವರಿ ಬೆಳೆ ಪದ್ಧತಿಯ ಬದಲಾವಣೆ ಬಗ್ಗೆ ಪರಿಶೀಲಿಸಲಾಗುತ್ತದೆ.

ಗದಗ ಜಿಲ್ಲೆಯಲ್ಲಿ ಗ್ರಾಹಕರ ವೇದಿಕೆ ಪ್ರಾರಂಭ.

2393 (2837) ಶ್ರೀ ಪಾಟೀಲ್ ಡಿ.ಆರ್. (ಗದಗ್) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.